# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ಚೌಕ, ಬೆಂಗಳೂರು-560 002.**

***ಪತ್ರಿಕಾ ಆಹ್ವಾನ*** ದಿನಾಂಕ: 05.07.2018

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಶಿವಾಜಿನಗರ ವಿಧಾನಸಭಾ ಕ್ಷೇತ್ರದ ಸಂಪಂಗಿರಾಮ ನಗರ ವಾರ್ಡ್-110ರ ವ್ಯಾಪ್ತಿಯ ಕಾವೇರಿ ಭವನದ ಹತ್ತಿರ ದಿನಾಂಕ 06/07/2018 ರಂದು ಶುಕ್ರವಾರ ಬೆಳಿಗ್ಗೆ 9.30 ಗಂಟೆಗೆ **ಕನ್ನಡಕ್ಕಾಗಿ ತನ್ನ ಜೀವನವನ್ನೇ ಅರ್ಪಣೆ ಮಾಡಿರುವ ಕನ್ನಡದ ಹೋರಾಟಗಾರರು ಹಾಗೂ 60 ವರ್ಷಗಳಿಂದ ನಡೆಸಿಕೊಂಡು ಬರುತ್ತಿರುವ ಕರ್ನಾಟಕ ರಾಜ್ಯೋತ್ಸವದ ನೆನಪಿನಾರ್ಥವಾಗಿ "ವಿಜಯನಗರ ಹೆಬ್ಬಾಗಿಲು"** ಶಂಕುಸ್ಥಾಪನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

*ಕಾರ್ಯಕ್ರಮದ ಶಂಕುಸ್ಥಾಪನೆಯನ್ನು ಸನ್ಮಾನ್ಯ ಡಾ||.ಜಿ.ಪರಮೇಶ್ವರ್, ಮಾನ್ಯ ಉಪ ಮುಖ್ಯಮಂತ್ರಿಗಳು, ಗೃಹ ಹಾಗೂ ಬೆಂಗಳೂರು ಅಭಿವೃದ್ಧಿ ಸಚಿವರು ರವರು ನೆರವೇರಿಸಲಿದ್ದಾರೆ. ಅಧ್ಯಕ್ಷತೆಯನ್ನು ಮಾನ್ಯ ಶಿವಾಜಿನಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ಸನ್ಮಾನ್ಯ ಶ್ರೀ ಆರ್.ರೋಷನ್ ಬೇಗ್ ರವರು ಹಾಗೂ ಘನ ಉಪಸ್ಥಿತಿಯನ್ನು ಪೂಜ್ಯ ಮಹಾಪೌರರಾದ ಶ್ರೀ ಆರ್.ಸಂಪತ್ ರಾಜ್ ರವರು ಹಾಗೂ ಮಾನ್ಯ ಮಾಜಿ ಶಾಸಕರು ಹಾಗೂ ಕನ್ನಡ ಚಳವಳಿ ನಾಯಕರಾದ ಸನ್ಮಾನ್ಯ ಶ್ರೀ ವಾಟಾಳ್ ನಾಗರಾಜ್ ರವರು ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಲೋಕಸಭಾ ಸದಸ್ಯರು, ವಿಧಾನಸಭಾ ಸದಸ್ಯರು, ವಿಧಾನ ಪರಿಷತ್ ಸದಸ್ಯರು, ಉಪ ಮಹಾಪೌರರು, ಆಡಳಿತ ಪಕ್ಷದ ನಾಯಕರು, ವಿರೋಧ ಪಕ್ಷದ ನಾಯಕರು, ಜೆ.ಡಿ.ಎಸ್. ಪಕ್ಷದ ನಾಯಕರು, ವಿವಿಧ ಸ್ಥಾಯಿ ಸಮಿತಿಯ ಅಧ್ಯಕ್ಷರುಗಳು, ಸ್ಥಳೀಯ ಪಾಲಿಕೆ ಸದಸ್ಯರಾದ ಶ್ರೀ ಆರ್.ವಸಂತ್ ಕುಮಾರ್ ರವರು, ಪಾಲಿಕೆಯ ಆಯುಕ್ತರು ಹಾಗೂ ಪಾಲಿಕೆಯ ಹಿರಿಯ ಅಧಿಕಾರಿಗಳು ಭಾಗವಹಿಸಲಿದ್ದಾರೆ.*

ದಿನಾಂಕ: 06.07.2018 ಶುಕ್ರವಾರ ಸಮಯ : ಬೆಳಗ್ಗೆ 9.30 ಗಂಟೆಗೆ

ಸ್ಥಳ: ಕಾವೇರಿ ಭವನದ ಹತ್ತಿರ, ಸಂಪಂಗಿರಾಮನಗರ, ಬೆಂಗಳೂರು.

**ಈ ಕಾರ್ಯಕ್ರಮವನ್ನು ನಗರದ ಕಾರ್ಯಕ್ರಮಗಳ ಅಂಕಣದಲ್ಲಿ ಪ್ರಕಟಿಸಲು ಕೋರಿದೆ.**

***ಈ ಮೇಲ್ಕಂಡ ಕಾರ್ಯಕ್ರಮಕ್ಕೆ ಪತ್ರಿಕಾ ಮಾಧ್ಯಮದವರು ತಮ್ಮ ವರದಿಗಾರರು ಹಾಗೂ ಛಾಯಾಗ್ರಾಹಕರನ್ನು ಹಾಗೂ ದೂರದರ್ಶನ ಮಾಧ್ಯಮದವರು ತಮ್ಮ ಚಿತ್ರೀಕರಣ ತಂಡದವರನ್ನು ಕಳುಹಿಸಿಕೊಡಬೇಕಾಗಿ ಕೋರಿದೆ.***

**ಸಾರ್ವಜನಿಕ ಸಂಪರ್ಕಾಧಿಕಾರಿ**